# ಬಾಲ ಯೇಸುವಿನ ಪುಣ್ಯಕ್ಷೇತ್ರ ಮಹೋತ್ಸವ, ಭಾಲ್ಕಿ.

ದಿನಾಂಕ 6–8 ನವೆಂಬರ್ 2026

**ಸುತ್ತೋಲೆ**

ಪ್ರಭು ಕ್ರಿಸ್ತನಲ್ಲಿ ಆತ್ಮೀಯ ಸಹೋದರ ಸಹೋದರಿಯರೆ,

ಜೈ ಕ್ರಿಸ್!

ಪ್ರತಿ ವರ್ಷದಂತೆ ಈ ವರುಷವೂ ಬಾಲ ಯೇಸುವಿನ ಪುಣ್ಯಕ್ಷೇತ್ರದ ಜಾತ್ರಾ ಉತ್ಸವವನ್ನು ಇದೇ ನವೆಂಬರ್ 6– 8 ರಂದು ಸಂಭ್ರಮದಿಂದ ಆಚರಿಸಲಿದ್ದೇವೆ ಈ ಜಾತ್ರಾ ಉತ್ಸವಕ್ಕೆ ನಿಮ್ಮೆಲ್ಲರನ್ನು ಪ್ರೀತಿಪೂರ್ವಕವಾಗಿ ಆಹ್ವಾನಿಸುತ್ತೇನೆ. ಈ ಸಂಭ್ರಮದ ಆಚರಣೆ ನಮಗೆ ದೇವರ ಕೃಪೆಯ ಸಮಯ. ಆದುದರಿಂದ ಭಕ್ತಿ ವಿಶ್ವಾಸದಿಂದ ಈ ಜಾತ್ರಾ ಉತ್ಸವ ಆಚರಣೆಗಳಲ್ಲಿ ಪಾಲುಗೊಳ್ಳೋಣ. ದೇವರ, ಬಾಲ ಯೇಸುವಿನ ಕೃಪಾ ಆಶೀರ್ವಾದಗಳಿಗೆ ಪಾತ್ರರಾಗೋಣ.

ಈ ಪ್ರಯುಕ್ತ ನಾವು ಕೈಗೊಳ್ಳುವ ಪಾದಯಾತ್ರೆಯು ನಮ್ಮೆಲ್ಲಾ ಪಾಪಗಳಿಗಾಗಿ ಪ್ರಾಯಶ್ಚಿತ್ತದ ಸಂಕೇತ ಮಾತ್ರವಲ್ಲದೆ ನಮ್ಮ ವಿಶ್ವಾಸ ಸಾಕ್ಷಿಯೂ ಆಗಿದೆ. ಆದುದರಿಂದ ಪ್ರತಿಯೊಂದು ಕೇಂದ್ರದಿಂದ ಎಲ್ಲಾ ಹಳ್ಳಿಗಳ ಜನರನ್ನು ಒಟ್ಟುಗೂಡಿಸಿ ಪಾದಯಾತ್ರೆಗೈಯೋಣ. ನಮ್ಮ ವಿಶ್ವಾಸವನ್ನು ಸಂಭ್ರಮಿಸೋಣ. ಬಾಲಯೇಸುವಿನ ಮಹಿಮೆಯನ್ನು ಪ್ರಕಟಿಸೋಣ. ಎಲ್ಲಾ ಕೇಂದ್ರಗಳ ಗುರುಗಳು, ಕನ್ಯಾ ಭಗಿನಿಯರು ಹಾಗೂ ಕೇಂದ್ರ ಪಾಲನಾ ಪರಿಷತ್ತಿನ ಹಾಗೂ ಗುದಿ ಪಾಲನಾ ಸಮಿತಿ ಸದಸ್ಯರು ಈ ಪಾದಯಾತ್ರೆ ವ್ಯವಸ್ಥೆಯನ್ನು ಮಾಡಲು ಸಹಕರಿಸಬೇಕಾಗಿ ವಿನಂತಿಸುತ್ತೇನೆ. ಪುಣ್ಯಕ್ಷೇತ್ರಕ್ಕೆ ಪಾದಯಾತ್ರೆಯನ್ನು ಇದೇ ಅಕ್ಟೋಬರ್ 2 ರಿಂದ ನವೆಂಬರ್ 8 ರ ವರೆಗೆ ಯಾವ ದಿನವೂ ಕೈಗೊಳ್ಳ ಬಹುದಾಗಿದೆ. ನೀವು ಪಾದಯಾತ್ರೆ ಕೈಗೊಳ್ಳುವಾಗ ದಯವಿಟ್ಟು ನಿರ್ದೇಶಕರಾಗಿರುವ ಫಾ। ಡೇವಿಡ್ ಅಂತೋಣಿ ಇವರಿಗೆ ಮುಂಚಿತವಾಗಿ ತಿಳಿಸಿದಲ್ಲಿ ನೀವು ಪುಣ್ಯಕ್ಷೇತ್ರಕ್ಕೆ ತಲುಪಿದಾಗ ನಿಮಗಾಗಿ ಪಾರ್ಥನೆ ಮಾಡಲು, ಪಾಪನಿವೇದನೆ ಆಲಿಸಲು, ಬಲಿಪೂಜೆ ಅರ್ಪಿಸಲು ಸಹಾಯ ವಾಗುವುದು.

ಭಾಲ್ಕಿ ಜಾತ್ರೆ ಉತ್ಸವದ ದಿನಗಳಲ್ಲಿ ಶುಕ್ರವಾರ, ಶನಿವಾರ ಹಾಗು ಭಾನುವಾರ ಬಲಿಪೂಜೆಯ ನಂತರ ಅನ್ನದಾಸೋಹ ಕಾರ್ಯಕ್ರಮ ಇರುವುದು. ಹಬ್ಬದ ದಿನಗಳಲ್ಲಿ ಪಾಪನಿವೇದನೆ, ಪಣ್ಯಕ್ಷೇತ್ರದಲ್ಲಿ ಬಾಲಯೇಸುವಿನ ದರ್ಶನ, ರೋಗನಿವಾರಣೆಗಾಗಿ ಪ್ರಾರ್ಥನೆ, ಮಾನಸಿಕ ಶಾಂತಿಗಾಗಿ ಪ್ರಾರ್ಥನೆ. ಜವಳ ಕಾರ್ಯಕ್ರಮ ಇವೆಲ್ಲವನ್ನು ನೆರವೇರಿಸಲು ಗುರುಗಳು, ಧರ್ಮ ಭಗಿನಿಯರು ನಿಮ್ಮ ಸೇವೆಗೆ ಸದಾ ಸಿದ್ಧರಿರುವರು. ಗುರುಗಳು. ಕನ್ಯಾಭಗಿನಿಯರು ಹಾಗು ಸ್ವಯಂ ಸೇವಕರು ಸಂಪೂರ್ಣವಾಗಿ ಸಹಕರಿಸಿ ನಿಮ್ಮ ಸೇವೆ ನೀಡಬೇಕಾಗಿ ವಿನಂತಿಸುತ್ತೇನೆ.

ಜಾತ್ರಾ ಉತ್ಸವಕ್ಕೆ ಬಹಳಷ್ಟು ಖರ್ಚು ಇರುವುದರಿಂದ ನವೆಂಬರ್ ತಿಂಗಳ ಮೊದಲನೆ ಭಾನುವಾರದಂದು ದೇವಾಲಯದಲ್ಲಿ ಸಂಗ್ರಹವಾದ ಪೂಜಾ ಕಾಣಿಕೆಯನ್ನು – ಜಾತ್ರಾ ಉತ್ಸವಕ್ಕಾಗಿ ನೀಡಬೇಕಾಗಿ ವಿನಂತಿಸುತ್ತೇನೆ. ಹಬ್ಬದ ಖರ್ಚಿಗಾಗಿ ಉದಾರ ಮನಸ್ಸಿನಿಂದ ನಿಮ್ಮ ಕಾಣಿಕೆಯನ್ನು ನೀಡಬೇಕಾಗಿ ವಿನಂತಿಸುತ್ತೇನೆ. ಪ್ರತಿ ಕುಟುಂಬ ಕನಿಷ್ಠ 500/– ರೂಪಾಯಿ ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇನೆ. ರೂಪಾಯಿ ಮೂರು ಸಾವಿರ (3000/–) ಕ್ಕಿಂತಲೂ ಮೇಲ್ಪಟ್ಟು ಕಾಣಿಕೆ ನೀಡಿದವರಿಗೆ ಹಬ್ಬದ ಪೂಜೆಯ ಮೊದಲು ಸನ್ಮಾನಿಸಲಾಗುವುದು. ಉದಾರ ಮನಸ್ಸಿನಿಂದ ನಿಮ್ಮ ದಾನ ನೀಡಿರಿ. ಬಾಲಯೇಸುವಿನ ಆಶೀರ್ವಾದಗಳಿಗೆ ಪಾತ್ರರಾಗಿರಿ ಎಂದು ಕರೆನೀಡುತ್ತೇನೆ.

ನಿಮ್ಮೆಲ್ಲರಿಗೂ ಪ್ರೀತಿಯ ಸ್ವಾಗತ ಬಯಸುವ,

ಕೃಪಾಲಯ, ಕಲಬುರಗಿ
01–10–2026

✝ಅತೀ ಪೂಜ್ಯ ರಾಬರ್ಟ್ ಮಿರಾಂದ
ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ

(ಈ ಸುತ್ತೋಲೆಯನ್ನು ರವಿವಾರದಂದು (04–10–2026) ಜನರಿಗೆ ಸಾರಿ ಹೇಳಬೇಕಾಗಿ ವಿನಂತಿ)